ಸಾಮಾನ್ಯವಾಗಿದೆ. ಈಚೆಗೆ ವಲಸೆ ಬಂದಿರುವ ಕೂಲಿ ಕಾರ್ಮಿಕರು, ಪಾನಿಪೂರಿ ಮಾರುವ, ಬೀದಿಬದಿ ಚೂಡಿದಾರ ತೂಗುಹಾಕಿದ, ಸೆಲೂನುಗಳಲ್ಲಿ ಸೇರಿಕೊಂಡ ಮತ್ತು ಸಣ್ಣಪುಟ್ಟ ಬೀದಿವ್ಯಾಪಾರದ ಮಂದಿ ಕೂಡ ಹೆಚ್ಚಿದ್ದು ಅವರಿಂದಾಗಿ ಉತ್ತರ ಕರ್ನಾಟಕದ ಕನ್ನಡ, ಉತ್ತರ ಭಾರತದ ಹಿಂದಿಯನ್ನು ಹೋಲುವ ಇತರ ಭಾಷೆಗಳು ಕೂಡ ಆಗಾಗ ಕಿವಿಗೆ ಬೀಳುತ್ತವೆ. ಮುವ್ವತ್ತು ವರ್ಷಗಳಿಂದ ನೋಡುತ್ತಿದ್ದೇನೆ, ಕರಾವಳಿ ಪ್ರದೇಶದ ಬಗ್ಗೆ ಯಾರು ಏನೇ ಹೇಳಲಿ, ಇಲ್ಲಿಯೂ ಹರಿಯುತ್ತಿರುವ, ಜನಸಾಮಾನ್ಯರಲ್ಲಿ ಮಿಡಿಯುತ್ತಿರುವ ಸಮಾನ ತಂತುವೇನಿದೆ, ಅದು ಕನ್ನಡದ್ದೇ. ನಾನು ಕರಾವಳಿಯ ಉದಾಹರಣೆ ನೀಡಿದೆ. ಆದರೆ ಕಾವೇರಿಗೆ ಸಂಬಂಧಿಸಿದಂತೆ ಕರ್ನಾಟಕದ ಬೆಂಗಳೂರು, ಮೈಸೂರು, ಮಂಡ್ಯ ಮುಂತಾದ ಆಸುಪಾಸಿನ ಕೆಲವು ಜಿಲ್ಲೆಗಳನ್ನು ಬಿಟ್ಟರೆ, ಮಹಾರಾಷ್ಟ್ರಕ್ಕೆ ಸಂಬಂಧಿಸಿದಂತೆ ಇವುಗಳೊಂದಿಗೆ ಬೆಳಗಾವಿಯನ್ನೂ ಸೇರಿಸಿಕೊಂಡು ನೋಡಿದರೆ, ಈ ಜಿಲ್ಲೆಗಳು ಸ್ಪಂದಿಸುವ ಮಟ್ಟದಲ್ಲಿ, ಅಷ್ಟೇ ತೀವ್ರವಾಗಿ ಕರ್ನಾಟಕದ ಬೇರೆ ಯಾವುದೇ ಜಿಲ್ಲೆಯೂ ಸ್ಪಂದಿಸಿರುವುದಿಲ್ಲ. ಇದನ್ನು ಎಲ್ಲರೂ ಬಲ್ಲರು. ಆದರೆ ಒಪ್ಪಿಕೊಳ್ಳುವುದು ಬಿಡುವುದು ಅವರವರ ಕಾರಣಕ್ಕೆ ವ್ಯತ್ಯಾಸವಾಗಬಹುದು, ಅದು ಬೇರೆ ಸಂಗತಿ. ಹೀಗಿದ್ದೂ ಕನ್ನಡದ ಬಗ್ಗೆ, ನಮ್ಮೆಲ್ಲರ ಆಳದ ಒಂದು ಭಾವನಾತ್ಮಕ ಸಂವೇದನೆಯ ಬಗ್ಗೆ ಯಾವುದೇ ಅನುಮಾನಕ್ಕೆ ಕಾರಣವಿಲ್ಲ. ಇದನ್ನು ಮೇಲ್ನೋಟಕ್ಕೆ ಕಂಡುಕೊಳ್ಳಲು ನಾವು ವಿಫಲರಾದರೆ ಅದು ನಮ್ಮ ವೈಫಲ್ಯವೇ ಹೊರತು ವಸ್ತುಸ್ಥಿತಿಯದ್ದಲ್ಲ. ಆಳವಾಗಿ ನೋಡಬಲ್ಲವರಿಗೆ ಇದು ಗೊತ್ತಿರುವ ಸತ್ಯ.

ಜನಸಾಮಾನ್ಯನೊಬ್ಬನಿಗೆ ಕನ್ನಡ, ಕರ್ನಾಟಕ ಎಂದರೆ ಇವತ್ತು ಕನ್ನಡ ಭಾಷೆಯನ್ನೇ ಮಾತನಾಡುವುದು, ಕನ್ನಡದ್ದನ್ನೇ ಓದುವುದು, ಕನ್ನಡ ಸಿನಿಮಾಗಳನ್ನೇ ನೋಡುವುದು, ಕನ್ನಡ ಚಾನೆಲ್ಲನ್ನೇ ನೋಡುವುದು, ಕಾವೇರಿ, ಮರಾಠಿ, ಹಿಂದಿ ಹೇರಿಕೆ, ತಮಿಳರ ಅಬ್ಬರ ಎಂದಾಗಲೆಲ್ಲ ಕುದಿಯುವುದು ಆಗಿ ಉಳಿದಿಲ್ಲ. ಹಾಗೆ ಉಳಿಯದೆಯೂ ಅವನು ಅಪ್ಪಟ ಕನ್ನಡಿಗನೇ, ಕರ್ನಾಟಕದ ಬಗ್ಗೆ ಅಭಿಮಾನ, ಹೆಮ್ಮೆ, ಪ್ರೀತಿ ಎಲ್ಲ ಇರುವವನೇ. ಅವನು ಕರ್ನಾಟಕದೊಳಗೇ ಇರಬೇಕಾಗಿಯೂ ಇಲ್ಲ, ಕರ್ನಾಟಕದಲ್ಲೇ ವರ್ಷಾನುಗಟ್ಟಲೆ ಇದ್ದೂ ಇಲ್ಲೇ ಹುಟ್ಟಿ ಬೆಳೆದವನಾಗಿರಬೇಕಾಗಿಯೂ ಇಲ್ಲ. ಅವನಿಗೆ ಇವತ್ತಿಗೂ ಕನ್ನಡ ಬರದಿದ್ದರೂ ಅದು ದೊಡ್ಡ ಸಂಗತಿ ಅನಿಸಬೇಕಾಗಿಯೇ ಇಲ್ಲ. ಇಲ್ಲಿರುವ ಏಳೆಂಟು ಮೆಡಿಕಲ್ ಕಾಲೇಜುಗಳ ಆಸ್ಪತ್ರೆಗಳಲ್ಲಿ ದುಡಿಯುವ ಉತ್ತರ ಭಾರತದ ಅನೇಕ ಎಳೆಯ ವೈದ್ಯರು ಸುಲಲಿತವಾಗಿ ಕನ್ನಡ ಮಾತನಾಡುತ್ತಾರೆ, ಕನ್ನಡದಲ್ಲೇ ಮಾತನಾಡಲು ಹಾತೊರೆಯುತ್ತಾರೆ. ಇಲ್ಲಿನವರೇ ಆದ ನರ್ಸುಗಳು ಒಂದಿಷ್ಟೂ ತಡವರಿಸದೆ ಮಲಯಾಳಂ, ತಮಿಳು ಮಾತನಾಡುತ್ತಾರೆ. ಅದು ಅವರಿಗೆ ವೃತ್ತಿಜೀವನದ ಅನಿವಾರ್ಯವೂ ಆಗಿದೆ. ಈ ನೆಲದ ಕಲೆಯಾದ ಯಕ್ಷಗಾನಕ್ಕೆ ಬಂದರೆ ತೆಂಕು ಬಡಗು ಎರಡೂ ತಿಟ್ಟಿನ ಪ್ರಸಂಗಗಳೆಲ್ಲ ಇದ್ದಿದ್ದು ಕನ್ನಡದಲ್ಲಿಯೇ, ತುಳುವಿನಲ್ಲಲ್ಲ. ತುಳು ಪ್ರಸಂಗಗಳು ಈಚಿನವು. ತುಳುವಿನಲ್ಲೇ ಇರುವ ಯಕ್ಷಗಾನದ ಪದಗಳು ಅದಕ್ಕೂ ನಂತರದವು. (ಆಸಕ್ತರು ಪುರುಷೋತ್ತಮ ಬಿಳಿಮಲೆಯವರ 'ಜನಸಂಸ್ಕೃತಿ' ಕೃತಿಯ 'ಕಲೆ ಮತ್ತು ಬದಲಾವಣೆ: ಯಕ್ಷಗಾನದ ಉದಾಹರಣೆ' ಲೇಖನವನ್ನು ಗಮನಿಸಬಹುದು) ಈ ನೆಲದಲ್ಲಿ ಮಾತ್ರವೇ ಕಾಣಸಿಗುವ ತಾಳಮದ್ದಲೆ ಎಂಬ ಪ್ರಕಾರವಂತೂ ಕನ್ನಡದಲ್ಲೇ ಇದ್ದು, ಯಕ್ಷಗಾನದ ಭಿನ್ನ ಆವೃತ್ತಿಗಳು ದೇಶದ ಹಲವೆಡೆ ಇದ್ದರೂ ಈ ತಾಳಮದ್ದಲೆ ಎಂಬುದು ಕರಾವಳಿಯಲ್ಲಿ ಮತ್ತು ಕನ್ನಡದಲ್ಲಿ ಮಾತ್ರ ಯಾಕೆ ಬೆಳೆದು ಬಂತು ಎಂಬ ಬಗ್ಗೆ ಸಾಕಷ್ಟು